# ನಮ್ಮ ಬಗ್ಗೆ

ಭಾರತ ಸಂವಿಧಾನವು ಮಹಿಳೆಯರ ಮತ್ತು ಮಕ್ಕಳ ರಕ್ಷಣೆಗೆ ಕ್ರಮ ತೆಗೆದುಕೊಳ್ಳಲು ಸರ್ಕಾರಕ್ಕೆ ನಿರ್ದೇಶನ ನೀಡಿರುತ್ತದೆ. ಸಂವಿಧಾನದಲ್ಲಿ ಒದಗಿಸಿರುವ ಅವಕಾಶಗಳಂತೆ ರಾಜ್ಯ ಸರ್ಕಾರವು ಮಹಿಳೆಯರ ಮತ್ತು ಮಕ್ಕಳ ರಕ್ಷಣೆಗೆ ಹಲವಾರು ಪ್ರಗತಿಪರ ಕ್ರಮಗಳನ್ನು ಕೈಗೊಂಡಿರುತ್ತದೆ.

ಇಲಾಖೆಯು ಮೊದಲು  ಪರಿವೀಕ್ಷಣೆ ಮತ್ತು ಅನುಪಾಲನೆ ಸೇವೆ ಇಲಾಖೆಯೆಂದು 1956 ರಲ್ಲಿ ಸ್ಥಾಪಿತಗೊಂಡು ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿತ್ತು. ಆಗ ಇಲಾಖೆಯು ಸಾಮಾಜಿಕ ಶಾಸನಗಳನ್ನು ಅನುಷ್ಠಾನಗೊಳಿಸಲು ಹಾಗು ಸುಧಾರಣಾ ಸಂಸ್ಥೆಗಳಿಗೆ ಸೇವೆಗಳನ್ನು ಒದಗಿಸಲು ಹೆಚ್ಚು ಗಮನ ನೀಡುತ್ತಿತ್ತು. ಮಹಿಳೆಯರ ಮತ್ತು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಹೆಚ್ಚು ಒತ್ತು ಹಾಗೂ ಗಮನ ನೀಡುವ ಉದ್ದೇಶದಿಂದ ಅಂತರ ರಾಷ್ಟ್ರೀಯ ಮಹಿಳಾ ವರ್ಷ 1975 ರಲ್ಲಿ ಪ್ರತ್ಯೇಕ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ  ನಿರ್ದೇಶನಾಲಯವನ್ನು ಸೃಜಿಸಲಾಯಿತು. ಮಹಿಳೆಯರ ಮತ್ತು ಮಕ್ಕಳ ವಿಶೇಷವಾಗಿ ಸಮಾಜದ ಬಲಹೀನ ವರ್ಗಗಳವರು ಆರೋಗ್ಯ ಮತ್ತು ಸಂತೃಪ್ತಿಯಿಂದ ಜೀವನ ನಡೆಸುವುದನ್ನು ಖಾತರಿ ಪಡಿಸಿಕೊಳ್ಳುವುದು ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ  ನಿರ್ದೇಶನಾಲಯವು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ, ಕಾರ್ಯಕ್ರಮಗಳ ಮುಖ್ಯ ಗುರಿಯಾಗಿರುತ್ತದೆ. ಇಲಾಖೆಯು ಯೋಜನೆಗಳನ್ನು ಶಾಸನಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸಿ,  ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ  ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಪ್ರಯತ್ನಗಳಿಗೆ ಸೂಕ್ತ ಮಾರ್ಗದರ್ಶನ ಹಾಗೂ ಸಂಯೋಜನೆ ನೀಡಿ ಸಹಕರಿಸುತ್ತದೆ. ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ  ಇಲಾಖೆಯು ಸರ್ಕಾರದ ಯೋಜನೆಗಳನ್ನು, ಶಾಸನಗಳನ್ನು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಸ್ವಯಂ ಸೇವಾ ಸಂಸ್ಥೆಗಳನ್ನು ಉತ್ತೇಜಿಸಿ ಅವರಿಗೆ ಗಣನೀಯ ಸಹಾಯ ನೀಡುತ್ತಿದೆ.

ಮಹಿಳೆಯರ ಮತ್ತು ಮಕ್ಕಳ ಸರ್ವಾಂಗೀಣ ಅಭಿವೃದ್ಧಿ ಹಾಗೂ ಮಹಿಳೆಯರ ಸಬಲೀಕರಣದತ್ತ  ಇಲಾಖೆಯು ಕೇಂದ್ರೀಕೃತ ಗಮನ ಹರಿಸಿದೆ. ಇಲಾಖೆಯ ಚಟುವಟಿಕೆಗಳನ್ನು ಮುಖ್ಯವಾಗಿ 3 ವಿಭಾಗಗಳಲ್ಲಿ ವರ್ಗೀಕರಿಲಾಗಿದೆ :

- ಮಹಿಳೆಯರ  ಅಭಿವೃದ್ಧಿ ಕಾರ್ಯಕ್ರಮಗಳು
- ಮಕ್ಕಳ  ಅಭಿವೃದ್ಧಿ ಕಾರ್ಯಕ್ರಮಗಳು
- ಸಾಮಾಜಿಕ ಶಾಸನಗಳನ್ವಯ ಕಾರ್ಯಕ್ರಮಗಳು

- ಜಂಟಿ ನಿರ್ದೇಶಕರು (ಪಿ.ಡಿ.ಎಂ. ಘಟಕ)
  - ಉಪ ನಿರ್ದೇಶಕರು (ಸುಧಾರಣೆ)
    - ಕ್ಷೇತ್ರಾಧಿಕಾರಿಗಳು
      - ಸಂಶೋದನಾ ಅಧಿಕಾರಿ – 2
  - ಉಪ ನಿರ್ದೇಶಕರು (ತನಿಖೆ)
    - ಸಹಾಯಕ ನಿರ್ದೇಶಕರು (ತನಿಖೆ)
      - ಸಂಶೋದನಾ ಅಧಿಕಾರಿ – 1
  - ಉಪ ನಿರ್ದೇಶಕರು (ಮಹಿಳಾ ಕಲ್ಯಾಣ)
    - ಸಹಾಯಕ ನಿರ್ದೇಶಕರು (ಮಹಿಳಾ ಕಲ್ಯಾಣ)
    - ಸಹಾಯಕ ನಿರ್ದೇಶಕರು (ವಿಶೇಷ ಘಟಕ)
      - ಕಾನೂನು ಸಲಹೆಗಾರರು
  - ಸಹಾಯಕ ನಿರ್ದೇಶಕರು (ದತ್ತು ಕೋಶ)

- ಶಿಶು ಅಭಿವೃದ್ಧಿ ಯೋಜನಾ ವಿಭಾಗ ಜಂಟಿ ನಿರ್ದೇಶಕರು
  - ಉಪ ನಿರ್ದೇಶಕರು (ತರಬೇತಿ)
    - ಸಹಾಯಕ ನಿರ್ದೇಶಕರು (ಐ.ಸಿ.ಡಿ.ಎಸ್)
    - ಸಹಾಯಕ ನಿರ್ದೇಶಕರು (ಆರೋಗ್ಯ)
    - ಸಹಾಯಕ ನಿರ್ದೇಶಕರು (ಉಸ್ತುವಾರಿ)
  - ಉಪ ನಿರ್ದೇಶಕರು (ಮಕ್ಕಳ ಕಲ್ಯಾಣ)
    - ಸಹಾಯಕ ನಿರ್ದೇಶಕರು (ಮಕ್ಕಳ ಕಲ್ಯಾಣ)

## ಇಲಾಖಾ ರಚನೆ (ಜಿಲ್ಲಾ ಮಟ್ಟದಲ್ಲಿ)

ಉಪ ನಿರ್ದೇಶಕರು (27)

- ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿಗಳು (27)
  - ಸಂಸ್ಥೆಯ ಮುಖ್ಯಸ್ಥರು(77)
  - ಪರಿವೀಕ್ಷಣಾಧಿಕಾರಿಗಳು ಪಿ.ಒ. ಆಕ್ಟ್ (27)
  - ಬಾಲಸೇವಾ ಸಂಸ್ಥೆ (9)
- ನಿರೂಪಣಾಧಿಕಾರಿಗಳು ಜಿಲ್ಲಾ ಐ.ಸಿ.ಡಿ.ಎಸ್. ಘಟಕ
  - ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಗಳು 185 ತಾಲ್ಲೂಕುಗಳು

## ಇಲಾಖಾ ರಚನೆ (ತಾಲ್ಲೂಕು ಮಟ್ಟದಲ್ಲಿ)

**ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು**
**185**

↓

**ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು**
**219**

↓

**ಮೇಲ್ವಿಚಾರಕಿಯರು**
**1875**

↓

**ಅಂಗನವಾಡಿ ಕಾರ್ಯಕರ್ತೆಯರು**
**51614**

↓

**ಅಂಗನವಾಡಿ ಸಹಾಯಕಿಯರು**
**51614**

## ಸ್ತ್ರೀಶಕ್ತಿ ವಿಭಾಗ




## ಆಡಳಿತ ವಿಭಾಗ

